**ದೋ.ಸಾ–45 ಫ್ರಾ.ಸಾ. : 30**

ಸಾಕ್ಷಿಯ ಹೆಸರು : ಡಾ: ಚತುರ್ಮುಖ ವಿ.ಎಸ್.

**ದಿನಾಂಕಃ 11.02.2026 ರಂದು ಸಾಕ್ಷಿಯು ವಿ.ಸಿ. ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿಯ ಪರ:–ಸಿ.ಎಲ್.ಎ.ಡಿ.ಸಿ ರವರಿಂದ**

9. Capture Meta data ಇಲ್ಲದೆ ವಿಡಿಯೋ ಬೇರೆ ಡಿವೈಸ್ ನಲ್ಲಿ ರೆಕಾರ್ಡ್ ಆಗಿರಬಹುದು ಎಂಬ ಸಾಧ್ಯತೆಯನ್ನು ನೀವು ನಿರಾಕರಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವಿಡಿಯೋವನ್ನು ಬೇರೆ ಡಿವೈಸ್ ಗಳಿಂದ ಅಥವಾ ಬೇರೆ ಮೂಲಗಳಿಂದ ರೆಡ್ಮಿ ಡಿವೈಸ್ ಗೆ ವರ್ಗಾವಣೆ ಮಾಡಲು ಬರುತ್ತದೆ ಎಂದರೆ ಸರಿ. MD5 Hash Value ವನ್ನು Forensic extraction ಆದ ನಂತರ ಬಂದಿರುವ Value ಎಂದರೆ ಸರಿ. ಸಾಕ್ಷಿ ಮುಂದುವರೆದು ಯಾವುದೇ ಅಡಿಯೋ ವಿಡಿಯೋ ಫೈಲ್ ಗಳನ್ನು Forensic ತಂತ್ರಾಂಶಗಳನ್ನು ಅಳವಡಿಸಿ ದತ್ತಾಂಶವನ್ನು ಹೊರತೆಗೆಯುವಾಗ Hash Value ಗಳು ಸೃಷ್ಟಿಯಾಗುತ್ತದೆ ಎಂದು ನುಡಿಯುತ್ತಾರೆ ಹಾಗೂ ಈ ಪ್ರಕರಣದಲ್ಲಿ ವಿಶ್ಲೇಷಣೆಗಾಗಿ ಕಳುಹಿಸಿರುವ ಮೊಬೈಲ್ ಫೋನ್ Primary evidence ಆಗಿರುವುದರಿಂದ Hash Value ವನ್ನು ತುಲನೆ ಮಾಡಲು ಸಮರ್ಪಕವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಮೊಬೈಲ್ ಜಪ್ತುಪಡಿಸಿಕೊಳ್ಳುವ ಮೊದಲು ಅದರಲ್ಲಿರುವ Hash Value ಏನು ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನಾವು ಹೇಳಲು ಬರುವುದಿಲ್ಲ, ಏಕೆಂದರೆ ಅದು ನಮ್ಮ ಪ್ರಯೋಗಾಲಯಕ್ಕೆ ಬಂದ ನಂತರ ಯಾವ Hash Value ಹೊಂದಿರುತ್ತದೆಯೋ ಅದನ್ನು ಮಾತ್ರ ಹೇಳಲು ಬರುತ್ತದೆ ಎಂದು ನುಡಿಯುತ್ತಾರೆ. ಮುದ್ದೆ ಮಾಲು–11 ಮೊಬೈಲಿನಲ್ಲಿರುವ ವಿಡಿಯೋ ಜಪ್ತುಪಡಿಸಿಕೊಳ್ಳುವ ಮೊದಲೇ ಎಡಿಟ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಡಿಯೋ ಎಡಿಟ್ ಆಗಿದೆಯೋ ಅಥವಾ ಇಲ್ಲವಾ ಎಂಬ ಬಗ್ಗೆ ಯಾವುದೇ ವಿಶ್ಲೇಷನೆ ಮಾಡಿಲ್ಲ ಎಂದರೆ ಸರಿಯಲ್ಲ. ಎಡಿಟ್ ವಿಚಾರಕ್ಕೆ ಸಂಬಂಧಿಸಿದಂತೆ ಯಾವ ಯಾವ ರೀತಿಯ ವಿಶ್ಲೇಷಣೆ ಮಾಡಿರುತ್ತೇನೆ ಎಂದು ವರದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

10. ಈ ಪ್ರಣಕದಲ್ಲಿನ ಘಟನೆ ಸಂಬಂಧಿಸಿದ ವಿಡಿಯೋೀಗೆ ಸಂಬಂಧಿಸಿದಂತೆ Deepfake detection analysis, AI synthetic detection software, frame level GAN generated Artifact analysis ಗಳನ್ನು ಮಾಡಿಲ್ಲ ಎಂದರೆ ಸಾಕ್ಷಿಯು ಮೇಲೆ ತಿಳಿಸಿರುವ ತಂತ್ರಾಂಶಗಳು ಸದರಿ ವಿಡಿಯೋ ಫೈಲ್ ನಲ್ಲಿ ಕಂಡುಬಂದಿಲ್ಲದ ಕಾರಣ, ಈ ರೀತಿಯ ವೈಜ್ಞಾನಿಕ ಪರೀಕ್ಷೆಗಳನ್ನು ನಡೆಸುವ ಅವಶ್ಯಕತೆ ಕಂಡಬರುವುದಿಲ್ಲ ಎಂದು ನುಡಿಯುತ್ತಾರೆ.2021 ನೇ ಇಸ್ವಿಯಿಂದ ನಮ್ಮ ಪ್ರಯೋಗಾಲಯದಲ್ಲಿ ಮೇಲೆ ತಿಳಿಸಿದ ವಿಶ್ಲೇಷಣೆಯನ್ನು ಮಾಡುತ್ತಾ ಬಂದಿರುತ್ತೇವೆ. ಈ ಪ್ರಕರಣದ ಮೊಬೈಲಿನಲ್ಲಿರುವ ವಿಡಿಯೋಗೆ ಸಂಬಂಧಿಸಿದಂತೆ Bixel level inconsistency ಪರೀಕ್ಷಿಸಿದ್ದೀರಾ ಎಂದರೆ ಸಾಕ್ಷಿಯು ಪರೀಕ್ಷಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪರೀಕ್ಷೆಯ ಬಗ್ಗೆ ವರದಿಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ಎಲ್ಲಾ ವಿಷಯವನ್ನು ವರದಿಯಲ್ಲಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ರೀತಿಯಲ್ಲಿ ವಿಶ್ಲೇಷಣೆ ಮಾಡಿದ ಬಗ್ಗೆ ನನ್ನ ವರದಿಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಸದರಿ ವಿಶ್ಲೇಷಣೆಗಳು ಸವಿಸ್ತಾರವಾಗಿರುವುದರಿಂದ ಆ ಎಲ್ಲಾ ವಿಷಯಗಳನ್ನು ವರದಿಯಲ್ಲಿ ನಮೂದಿಸಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ರೀತಿಯಲ್ಲಿ ಯಾವುದೇ ವಿಶ್ಲೇಷಣೆ ಮಾಡದೆ ಇದ್ದರೂ ಸಹ ವಿಶ್ಲೇಷಣೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಛಾಯಾಚಿತ್ರದಲ್ಲಿರುವ ವ್ಯಕ್ತಿಯ ಮುಖ ಚಹರೆಗಳ ಹೊಲಿಕೆಗೆ ಸಂಬಂಧಿಸಿದಂತೆ Bio-metric Probability percentage ಬಗ್ಗೆ ವರದಿಯಲ್ಲಿ ಹೇಳಿಲ್ಲ ಎಂದರೆ ಸರಿ. Automated facial recognition scoring metrics ಬಳಸಿದ ಬಗ್ಗೆ ವರದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. Match confidence score ನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. visual observation ಮೇಲೆ ವರದಿಯನ್ನು ನೀಡಿರುವುದರಿಂದ ಆ ವಿಡಿಯೋದಲ್ಲಿರುವ ವ್ಯಕ್ತಿಗಳಿಗೂ ಫೋಟೋದಲ್ಲಿ ಕಾಣುವ ವ್ಯಕ್ತಿಗೂ ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. 2017 ರ ನಂತರ ಬಂದಂತಹ ಸ್ಮಾರ್ಟ್ ಫೋನಿನಲ್ಲಿ ಎಡಿಟಿಂಗ್,

ಟ್ರಿಮ್ಮಿಂಗ್, ಕ್ರಾಪಿಂಗ್ ವ್ಯವಸ್ಥೆ ಇರುತ್ತದೆ ಎಂದರೆ ಸಾಕ್ಷಿಯು ನಿರ್ಧಿಷ್ಟವಾಗಿ ಫೋನ್‌ಗಳನ್ನು ನೋಡದೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಮುದ್ದೆ ಮಾಲು-11 ಮೊಬೈಲಿನಲ್ಲಿ ಈ ಎಲ್ಲಾ ರೀತಿಯ ವ್ಯವಸ್ಥೆಗಳು ಇತ್ತು ಎಂದರೆ ಸಾಕ್ಷಿಯು ನಾನು ಅದರ ಬಗ್ಗೆ ವಿಶ್ಲೇಷಣೆ ಮಾಡಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ವಿಶ್ಲೇಷಣೆ ಮಾಡಲು ಅತೀ ಅಗತ್ಯವಾದ ಅಂಶ ಎಂದರೆ ಸರಿಯಲ್ಲ.

12. D1A ಎಂದು ಗುರುತು ಮಾಡಿರುವ ಮೊಬೈಲ್ ಫೋನಿನಲ್ಲಿ ಕಂಡುಬರುವ ಪ್ರಕರಣಕ್ಕೆ ಸಂಬಂಧಿಸಿದ ವಿಡಿಯೋ ಫೈಲ್ ನ ಹೆಸರಿನಲ್ಲಿ ದಿನಾಂಕ ಮತ್ತು ಸಮಯ ಕಂಡುಬಂದಿದ್ದು, ಸದರಿ ದಿನಾಂಕ ಮತ್ತು ಸಮಯ Meta data ದಲ್ಲಿ ಕಂಡುಬರುವ ವಿಡಿಯೋ ಸೃಷ್ಟಿಯಾದ ದಿನಾಂಕ ಮತ್ತು ಸಮಯಕ್ಕೆ ಹೋಲಿಕೆ ಆಗಿರುವುದು ಕಂಡುಬರುತ್ತದೆ ಅಂತ ನಾನು ಯಾವುದೇ ಆಧಾರವಿಲ್ಲದೆ ಕೇವಲ ಊಹೆಯ ಮೇಲೆ ಹೇಳಿರುತ್ತೇನೆ ಹಾಗೂ ಆ ಬಗ್ಗೆ time stamp ನ್ನು Internal system logs ಜೊತೆಗೆ ಪರಿಶೀಲನೆ ಮಾಡಿಲ್ಲ ಎಂದರೆ ಸಾಕ್ಷಿಯು ಫೋನ್ ಗಳಲ್ಲಿ ಯಾವುದೇ log ಗಳು ಸೃಷ್ಟಿಯಾಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರಯೋಗಾಲಯಕ್ಕೆ ಬಂದಂತಹ ಮುದ್ದೆ ಮಾಲುಗಳ ಮೇಲೆ ಇದ್ದಂತಹ ಸೀಲನ್ನು ಸ್ವತಃ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ವಸ್ತು ಸಂಖ್ಯೆ:1 (D1A) ಮೊಬೈಲ್ ಫೋನ್ ನಲ್ಲಿರುವ ವಿಡೀಯೋ ಫೈಲ್ ನಲ್ಲಿ ಕಂಡುಬರುವ ವ್ಯಕ್ತಿಗಳಿಗೂ ವಸ್ತು ಸಂಖ್ಯೆ: 2, 3,4,5 ಫೋಟೋಗಳಲ್ಲಿ ಕಂಡುಬರುವ ವ್ಯಕ್ತಿಗಳಿಗೂ ಒಂದಕ್ಕೊಂದು ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಸರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ